# ಉಡುಪಿ ನಗರಸಭೆ

ಸಂಖ್ಯೆ: ಉನಸ: ಸಿಆರ್: 40:2007-08 ದಿನಾಂಕ 12-11-2007.

## ಅಲ್ಪಾವಧಿ ಟೆಂಡರ್ ಪ್ರಕಟಣೆ ( ಎರಡು ಲಕೋಟೆ ಪದ್ಧತಿ)

ಎಸ್.ಎಫ್.ಸಿ. ಅನುದಾನದಲ್ಲಿ (ಮುಕ್ತ ನಿಧಿಯಲ್ಲಿ) ಈ ಕೆಳಗೆ ಸೂಚಿಸಿದ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಪಂಚಾಯತ್ ಗುತ್ತಿಗೆದಾರರಿಂದ ನಿರ್ದಿಷ್ಟ ಫಾರಂನಲ್ಲಿ ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್ಮೆಂಟ್ ಆಕ್ಟ್ 2000 ದ ಪ್ರಕಾರ ದ್ವಿ ಲಕೋಟೆ ಪದ್ಧತಿಯಲ್ಲಿ ಮೊಹರಾದ ಐಟಂದರ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದ್ವಿ ಲಕೋಟೆ ಬಿಡ್ ಪದ್ಧತಿ, ತಾಂತ್ರಿಕ ಬಿಡ್ ಹಾಗೂ ವಿತ್ತೀಯ ( ಫೈನಾನ್ಸಿಯಲ್) ಬಿಡ್ಡನ್ನು ಒಳಗೊಂಡಿದೆ. ಬಿಡ್‌ಗಳನ್ನು ತಾಂತ್ರಿಕ ಬಿಡ್ ಹಾಗೂ ವಿತ್ತೀಯ ಬಿಡ್ ಎಂದು ಗುರುತು ಹಾಕಿದ ಎರಡು ಪ್ರತ್ಯೇಕ ಮೊಹರಾದ ಲಕೋಟೆಗಳಲ್ಲಿ ಎರಡು ಭಾಗಗಳಲ್ಲಿ ಸ್ವೀಕರಿಸಲಾಗುವುದು. ಈ ಶಿರೋನಾಮೆ ನಮೂದಿಸಿ ಇನ್ನೊಂದು ಮೊಹರಾದ ಲಕೋಟೆಯಲ್ಲಿಡಬೇಕು ಮತ್ತು ಬಿಡ್ಡುದಾರರ ಹೆಸರು ಹಾಗೂ ಪೂರ್ತಿ ಅಂಚೆ ವಿಳಾಸದೊಂದಿಗೆ ಕಳುಹಿಸುದಾರರಿಗೆ ಕಳುಹಿಸಬೇಕು. ಪೂರ್ತಿಗೊಳಿಸಿದ ಬಿಡ್ಡನ್ನು ಶೆಡ್ಯೂಲ್‌ನಲ್ಲಿ ಒಳಗೊಂಡ ವಿಶೇಷ ನಿಯಮಗಳ ಕೆಪಿಡಬ್ಲ್ಯೂ ಆ್ಯಕ್ಟ್ 2000 ದಲ್ಲಿ ನಿರೂಪಿತ ಶರ್ತಗೊಳಪಟ್ಟು ದಿನಾಂಕ 23-11-07 ರಂದು ಸಂಜೆ 4.00 ಗಂಟೆಯವರೆಗೆ ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಹೊಂದಿದವರು, ಸ್ವೀಕರಿಸುವರು. ಈ ಕೆಳಗೆ ಸೂಚಿತ ದಿನಾಂಕದಂದು ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿರುವ ಬಿಡ್ಡುದಾರರ ವಿತ್ತೀಯ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು.

ಈ ಕೆಳಗೆ ನಮೂದಿಸಿದ ಯಾವುದಾದರೂ ದಿನಾಂಕಗಳಂದು ಸಾರ್ವತ್ರಿಕ ರಜಾವಾದಲ್ಲಿ ಮುಂದಿನ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು. ಗುತ್ತಿಗೆದಾರರಿಗೆ ಹೆಚ್ಚಿನ ವಿವರಗಳೇನಾದರೂ ಬೇಕಾದಲ್ಲಿ ಈ ಕಚೇರಿಯಿಂದ ಪಡೆಯಬಹುದು.

| ಕ್ರ.. ಸಂ | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ ( ರೂ. ಲಕ್ಷಗಳಲ್ಲಿ) | ಗುತ್ತಿಗೆದಾರರ ಅರ್ಹತೆ | ಇ.ಎಂ.ಡಿ. ಠೇವಣಿ (ರೂ.ಗಳಲ್ಲಿ) | ಟೆಂಡರು ಅವಧಿ (ಮಳೆಗಾಲ ಹೊರತು ಪಡಿಸಿ) | ಟೆಂಡರು ಫಾರಂ ಬೆಲೆ ( ರೂ. ಗಳಲ್ಲಿ) |
|---|---|---|---|---|---|---|
| 1 | ಮಲ್ಪೆ ಮಧ್ವರಾಜ ರಸ್ತೆಯನ್ನು ಸಿಟಿಜನ್ ವೃತ್ತದಿಂದ ವಡಭಾಂಡೇಶ್ವರ ವೃತ್ತದ ತನಕ ರಸ್ತೆಯ ಆಯ್ದ ಭಾಗಗಳಲ್ಲಿ ಚರಂಡಿ ಕಲ್ಲು ಕಟ್ಟಣಿಕೆ ನಿರ್ಮಿಸಿ ರಸ್ತೆ ವಿಸ್ತರಿಸಿ ಅಭಿವೃದ್ಧಿ ಪಡಿಸುವುದು. | 49,92,681.00 | 1 ನೇ ದರ್ಜೆ | 49,926.00 | 3 ತಿಂಗಳು | 2,000.00 |
| 2 | ಮಲ್ಪೆ ಮಧ್ವರಾಜ ರಸ್ತೆಯನ್ನು ವಡಭಾಂಡೇಶ್ವರ ವೃತ್ತದಿಂದ ಬೀಚ್ ವೃತ್ತದ ತನಕ ರಸ್ತೆಯ ಆಯ್ದ ಭಾಗಗಳಲ್ಲಿ ಚರಂಡಿ ಕಲ್ಲು ಕಟ್ಟಣಿಕೆ ನಿರ್ಮಾಣ, ರಸ್ತೆ ವಿಸ್ತರಿಸಿ ಅಭಿವೃದ್ಧಿ ಪಡಿಸುವುದು. | 49,92,681.00 | 1ನೇ ದರ್ಜೆ | 49,926.00 | 3 ತಿಂಗಳು | 2,000.00 |

**ಸಾಮಾನ್ಯ ನಿಯಮಗಳು**

Created by Neevia docuPrinter trial version

1 ಖಾಲಿ ಟೆಂಡರು ಫಾರಂಗಳಿಗೆ ಅರ್ಜಿಗಳನ್ನು ದಿನಾಂಕ 19-11-2007 ರವರೆಗೆ ನಿಗದಿಪಡಿಸಿದ ಬೆಲೆಯೊಂದಿಗೆ (ಇದನ್ನು ಹಿಂದಿರುಗಿಸಲಾಗುವುದಿಲ್ಲ) ಕೆಲಸದ ಎಲ್ಲಾ ದಿನಗಳಂದು ಕಚೇರಿ ವೇಳೆಯಲ್ಲಿ ಸ್ವೀಕರಿಸಲಾಗುವುದು. ಅರ್ಜಿ ಜೊತೆಗೆ ಗುತ್ತಿಗೆದಾರರು ಅವರ ರಿಜಿಸ್ಟ್ರೇಶನ್‌ನ ಸರ್ಟಿಫೈಡ್ ಪ್ರತಿಯನ್ನು ಸಲ್ಲಿಸತಕ್ಕದ್ದು. ಕೆಲಸದ ಬಿಡ್ಡಿಂಗ್‌ನಲ್ಲಿ ಆಸಕ್ತಿಯುಳ್ಳ ಗುತ್ತಿಗೆದಾರರು ಕೆಳ ಸಹಿದಾರರಿಗೆ ಅರ್ಜಿ ಸಲ್ಲಿಸಬೇಕು. ಇ.ಎಂ.ಡಿ.ಯನ್ನು ರಾಷ್ಟ್ರೀಕೃತ ಯಾ ಶೆಡ್ಯೂಲ್ ಬ್ಯಾಂಕಿನಿಂದ ಪಡೆದ ಎಫ್.ಡಿ.ಆರ್./ ಕಾಲ್ ಡೆಪೋಸಿಟ್, ಡಿ.ಡಿ ಅಥವಾ ಎನ್.ಎಸ್.ಸಿ ರೂಪದಲ್ಲಿ (ಎನ್.ಎಸ್.ಸಿ, ಯನ್ನು ಕೆಳ ಸಹಿದಾರರ ಹೆಸರಿಗೆ ಪ್ಲೆಜ್ ಮಾಡಬೇಕು) ಸಲ್ಲಿಸಬೇಕು. ನಿಗದಿಪಡಿಸಿದ ಮುಂಗಡ ಠೇವಣಿಯೊಂದಿಗೆ ಸಲ್ಲಿಸದಿರುವ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.

2 **ದಿನಾಂಕದ ವಿವರಗಳು ಈ ಕೆಳಗಿನಂತಿವೆ:**

ಅ) ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 19-11-2007

ಅ) ಖಾಲಿ ಟೆಂಡರು ಫಾರಂಗಳನ್ನು ಕೊಡುವ ದಿನಾಂಕ 21-11-2007

ಇ) ಟೆಂಡರು ಸಲ್ಲಿಸುವ ಕೊನೆಯ ದಿನಾಂಕ 23-11-2007 ಅಪರಾಹ್ನ 4.00 ವರೆಗೆ

ಈ) ಟೆಂಡರನ್ನು ತೆರೆಯುವ ದಿನಾಂಕ 23-11-2007 ಅಪರಾಹ್ನ 4.00 ಕ್ಕೆ ಅಥವಾ ಮುಂದೆ ತಿಳಿಸಲಾಗುವ ಸಮಯ ಮತ್ತು ದಿನಾಂಕದಂದು.

3) ಕಾಮಗಾರಿ ಪೂರ್ತಿಗೊಳಿಸಿದ ಬಳಿಕ ಎರಡು ವರ್ಷಗಳ ಕಾಲ ಯಾವುದೇ ದುರಸ್ತಿ ಕಾರ್ಯ ಬರಬಾರದು. ಈ ಮೇಲಿನಂತೆ ಪ್ರಕಟಿತ ಚಾಚು/ ಚೈನೇಜುಗಳಲ್ಲಿ ಈ ಮೇಲಿನಂತೆ ದುರಸ್ತಿ ಅವಧಿಯಲ್ಲಿ (ಡಿಫೆಕ್ ಲಿಯಾಬಿಲಿಟಿ ಅವಧಿ) ಯಾವುದಾದರೂ ದುರಸ್ತಿ ಬೇಕಾದರೆ ಗುತ್ತಿಗೆದಾರ/ವಾಣಿಜ್ಯ ಸಂಸ್ಥೆ ಅದನ್ನು ತಮ್ಮ ಸ್ವಂತ ಖರ್ಚಿನಲ್ಲಿ ಪುನರ್ ನಿರ್ಮಿಸಿ ಕೊಡಬೇಕು.

4) ಪ್ರತಿ ಟೆಂಡರುದಾರರು ರಸ್ತೆ ಕೆಲಸಕ್ಕೆ ಈ ಕೆಳಗೆ ನೀಡಲಾದಂತೆ ಯಂತ್ರೋಪಕರಣ ಸ್ವಂತ ಅಥವಾ ಬಾಡಿಗೆಗೆ ಹೊಂದಿದ್ದು, ಅವುಗಳ ಮಾಲಿಕತ್ವದ ಪುರಾವೆ ಲಗ್ತೀಕರಿಸಬೇಕು. ಪುರಾವೆ ರಹಿತವಾಗಿ ಸಲ್ಲಿಸಿದ ಟೆಂಡರುಗಳನ್ನು ಅನರ್ಹಗೊಳಿಸಲಾಗುವುದು.

| ಕ್ರ. ಸಂ | ಯಂತ್ರೋಪಕರಣಗಳ ವಿವರ | ಸಂಖ್ಯೆಗಳು | ಮಾಲಿಕತ್ವದ ಪುರಾವೆ |
|---|---|---|---|
| 1 | ಹಾಟ್‌ಮಿಕ್ಸ್ ಪ್ಲಾಂಟ್ 40/60 ಟಿಪಿಎಚ್ ಯಾ ಹೆಚ್ಚಿನ ಸಾಮಾರ್ಥ್ಯ (ಎಂ.ಒ.ಆರ್.ಟಿ.ಎಚ್. ಮಾದರಿ ಪ್ರಕಾರ) | 1 | ಪರ್ಚೇಸ್ ಇನ್‌ವ್ವಾಸ್ /ಸೇಲ್ ಡೀಡ್/ ಬಾಡಿಗೆ ಪಡೆದ ವಿವರಗಳು ( ಮಾಲೀಕನೊಂದಿಗೆ ಉಪಕರಣದ ಮಾಲಿಕತ್ವದ ಪುರಾವೆ ಸಹಿತ ಹಯರ್ ಅಗ್ರಿಮೆಂಟ್) |
| 2 | ಪೇವರ್ ಫಿನಿಷರ್ | 1 | " |
| 3 | ವೈಬ್ರೇಟರಿ ರೋಡ್ ರೋಲರ್ | 1 | ಪರ್ಚೇಸ್ ಇನ್‌ವ್ವಾಸ್ /ಸೇಲ್ ಡೀಡ್‌ನೊಂದಿಗೆ ಮೂಲ ಮಾರಾಟ ಮಾಡಿದವರ ಪರ್ಚೇಸ್ ಇನ್‌ವ್ವಾಸ್ ಪ್ರತಿ |
| 4 | ಸ್ಟಾಟಿಕ್ ರೋಡ್ ರೋಲರ್ | 2 | " |
| 5 | ಮೆಕ್ಯಾನಿಕಲ್ ಸ್ಪ್ರೇಯರ್ | 2 | " |
| 6 | ಟಿಪ್ಪರ್ | 4 | ಆರ್.ಟಿ.ಓ. ನೋಂದಣಿ ಪ್ರಮಾಣ ಪತ್ರದ ಪ್ರತಿ |
| 7 | ಏರ್ ಕಂಪ್ರೆಶರ್ | 2 | ಮಾರಾಟಗಾರರಿಂದ ಪರ್ಚೇಸ್ ಇನ್‌ವೈಸ್ /ಸೇಲ್ ಡೀಡ್‌ನ ಪ್ರತಿ |

5) ಟೆಂಡರಿನಲ್ಲಿ ಭಾಗವಹಿಸಲಿಚ್ಚಿಸುವ ಗುತ್ತಿಗೆದಾರರು ಉದ್ದೇಶಿಸಿರುವ ಕಾಮಗಾರಿಯ ಶೇ. 30 ರಷ್ಟು ಮೊತ್ತದ ಇದೇ ತರಹದ ಕಾಮಗಾರಿಯನ್ನು ಕಳೆದ ಐದು ವರ್ಷಗಳ ಅವಧಿಯ ಒಂದು ಆರ್ಥಿಕ ವರ್ಷದಲ್ಲಿ ಪೂರೈಸಿರತಕ್ಕದ್ದು. ಈ ಕುರಿತು ಪ್ರಮಾಣ ಪತ್ರವನ್ನು ಇಲಾಖಾ ಅಧಿಕಾರಿಯವರಿಂದ ಪಡೆದು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

6) ಕಾಮಗಾರಿ ನಿರ್ವಹಿಸುವುದಕ್ಕಾಗಿ, ಬೇಕಾದ ಆರ್ಥಿಕ ಸಾಮಾರ್ಥ್ಯವನ್ನು ಹೊಂದಿರುವ ಬಗ್ಗೆ ಟೆಂಡರ್ ಮೊಬಲಗಿನ ಶೇ. 30 ಕ್ಕೆ ಸಮನಾದ ಮೊಬಲಗಿನ ( ಯಾವುದೇ ರಾಷ್ಟ್ರೀಕೃತ ಬ್ಯಾಂಕಿನ) ಲೈನ್ ಆಫ್ ಕ್ರೆಡಿಟ್‌ನ್ನು ತಪ್ಪದೆ ನೀಡಬೇಕು (ಸಾಲ್ವೆನ್ಸಿ)

7) ತಾಂತ್ರಿಕ ಬಿಡ್‌ಗಳ ಪುರಾವೆಯಾಗಿ ಲಗ್ತೀಕೃತ ಎಲ್ಲಾ ದಾಖಲೆಗಳನ್ನು ಜಿಲ್ಲಾ ಮಟ್ಟದ ಅಧಿಕಾರಿಗಿಂತ ಕೆಳಗಿಲ್ಲದ ಶ್ರೇಣಿಯ ಗಜೆಟೆಡ್ ಅಧಿಕಾರಿಯವರಿಂದ ದೃಢೀಕರಿಸಿ ಸಲ್ಲಿಸಬೇಕು. ತಪ್ಪಿದರೆ ಬಿಡ್‌ಗಳನ್ನು ಅನರ್ಹಗೊಳಿಸಲಾಗುತ್ತದೆ. ಮೂಲ ದಾಖಲೆಗಳನ್ನು ಯಾವುದೇ ಹಂತದಲ್ಲಿ ಪರಿಶೀಲನಾರ್ಥವಾಗಿ ಕೇಳಿದಾಗ ಹಾಜರುಪಡಿಸಬೇಕು. ಮೂಲ ದಾಖಲೆಗಳನ್ನು ನೀಡಲು ತಪ್ಪಿದರೆ ತಾಂತ್ರಿಕ ಬಿಡ್‌ಗಳ ಅನರ್ಹಗೊಳಿಸಲಾಗುವುದು.

Created by Neevia docuPrinter trial version

8) ತಾಂತ್ರಿಕ ಬಿಡ್‌ನೊಂದಿಗೆ ಸಮಾಂಜಸವಾದ (ರಿವೆಲೆಂಟ್) ಪ್ರಮಾಣ ಪತ್ರಗಳು ಹಾಗೂ ವಿವರಗಳನ್ನು ಮಾತ್ರ ಲಗ್ತೀಕರಿಸಬೇಕು. ಕಂಪನಿ: ಏಜೆನ್ಸಿಗಳು/ವಾಣಿಜ್ಯ ಸಂಸ್ಥೆಗಳ: ಪ್ರೊಫೈಲ್ ವಿವರಗಳನ್ನು ಲಗ್ತೀಕರಿಸಬೇಕು.

9) ಜಂಟಿ ಸಹಭಾಗಿತ್ವದ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ.

10) ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಯವರು ಹೊಂದಿರುತ್ತಾರೆ

11 ಶರ್ತಬದ್ಧ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.

12 'ರಸ್ತೆ ಕೆಲಸವನ್ನು ಎಂ.ಓ.ಆರ್.ಟಿ.ಎಚ್; ಮಾದರಿ ಪ್ರಕಾರವಿರುವ ಪೇವರ್ ಯುಕ್ತವಾದ (Paver Finish) ಹಾಟ್‌ಮಿಕ್ಸ್‌ನಿಂದ ಮಾತ್ರ ನಿರ್ವಹಿಸಬೇಕು. ತಪಿದಲ್ಲಿ ಇಲಾಖಾ ನಿಯಮಗಳ ರೀತ್ಯ ಕ್ರಮಕೈಗೊಳ್ಳಲಾಗುವುದು.

13 ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಮುಗಿಸಬೇಕು. ತಪ್ಪಿದಲ್ಲಿ ನಿಯಮ ರೀತ್ಯ ದಂಡನಾ ಶುಲ್ಕ ತೆರಬೇಕಾಗುತ್ತದೆ.

14 ಸರಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಹಣದ ಲಭ್ಯತೆಯನ್ನು ಅನುಸರಿಸಿ ಗುತ್ತಿಗೆದಾರರಿಗೆ ಬಿಲ್ಲನ್ನು ಪಾವತಿಸಲಾಗುವುದು.

15 ಗುತ್ತಿಗೆದಾರರು ಸಿಮೆಂಟ್, ಉಕ್ಕು, ಡಾಮರು ಹಾಗೂ ಕಾಮಗಾರಿಗಳಿಗೆ ಬೇಕಾದ ಎಲ್ಲಾ ಸಾಮಾಗ್ರಿಗಳ ಸಂಗ್ರಹಕ್ಕೆ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳಬೇಕು. ಇದನ್ನು ಕೆಲಸಕ್ಕೆ ಉಪಯೋಗಿಸುವ ಮೊದಲು ಗುಣ ನಿಯಂತ್ರಣ ಪರೀಕ್ಷೆಗೆ ಒಳಪಡಿಸಿ, ಫಲಿತಾಂಶವು ಐ.ಎಸ್.ಎಸ್ ಗುಣಮಟ್ಟಕ್ಕೆ ಸರಿಹೊಂದುವಂತಿರಬೇಕು. ಇದನ್ನು ಕೆಲಸದ ಎಲ್ಲಾ ಹಂತಗಳಲ್ಲಿ ಒದಗಿಸಬೇಕು. ಕೆಲಸದ ಕುರಿತಾದ ಯಾವುದೇ ಇತರ ವಿವರವನ್ನು ಕಚೇರಿಯ ವೇಳೆಯಲ್ಲಿ ಈ ಕಚೇರಿಯಿಂದ ಪಡೆಯಬಹುದಾಗಿದೆ.

16 ಗುತ್ತಿಗೆದಾರರ ಟೆಂಡರು ದರಗಳಿಗೆ ಒಂದು ವರ್ಷ (ಟೆಂಡರು ತೆರದ ದಿನಾಂಕದಿಂದ) ಅವಧಿಯ ಸಿಂಧುತ್ವ ಹೊಂದಿರುತ್ತದೆ.

17 ಅಂತಿಮ ಬಿಲ್ಲು ಪಾವತಿಸಿದ ದಿನಾಂಕದಿಂದ ಮುಂದಿನ 2 ವರ್ಷಗಳವರೆಗೆ ಗುತ್ತಿಗೆದಾರರು ಯಾವುದೇ ಹೆಚ್ಚಿನ ವೆಚ್ಚವಿಲ್ಲದೇ ಸದರಿ ಕಾಮಗಾರಿಯನ್ನು ನಿರ್ವಹಣೆ ಮಾಡಬೇಕು.

18 ಕಾಮಗಾರಿಗಳು ಪೂರ್ಣಗೊಂಡ ನಂತರ 3ನೇ ಪಾರ್ಟಿಯಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಡೀಕರಣ ಪತ್ರವನ್ನು ಸಲ್ಲಿಸಿದ ನಂತರ ಬಿಲ್ಲು ಪಾವತಿಗೆ ಕ್ರಮಕೈಗೊಳ್ಳಲಾಗುವುದು.

19 ಶೇ. 5 ಅಥವಾ ಅದಕ್ಕಿಂತ ಕಡಿಮೆ ದರ ಸೂಚಿಸಿದಲ್ಲಿ ಕಾಮಗಾರಿ ಮಂಜೂರುಗೊಂಡ ಗುತ್ತಿಗೆದಾರರು ಈ ಟೆಂಡರು ಮೊತ್ತಕ್ಕೆ ಅನುಗುಣವಾಗಿ ಟೆಂಡರುದಾರರ ವ್ಯತ್ಯಾಸವನ್ನು ನಿಬಡ್ಡಿಯಾಗಿ ಹೆಚ್ಚುವರಿ ಠೇವಣಿಯಾಗಿ ನಗರಸಭೆಗೆ ನೀಡತಕ್ಕದ್ದು. ಈ ಠೇವಣಿಯನ್ನು ಕಾಮಗಾರಿ ಪೂರ್ತಿಗೊಂಡು ಪರಿಶೀಲನೆ ಬಳಿಕ ಮರುಪಾವತಿಸಲಾಗುವುದು. ವ್ಯತ್ಯಾಸದ ಮೊತ್ತವನ್ನು ನಗದಾಗಿ ನಗರಸಭೆಗೆ ಪಾವತಿಸಿ ರಶೀತಿಯನ್ನು ಟೆಂಡರುನೊಂದಿಗೆ ಲಗತ್ತಿಸತಕ್ಕದ್ದು. ಇದರಂತೆ ಸೂಚಿಸುವ ದರದ ಪೈಸೆಯನ್ನು 2 ಸಂಖ್ಯೆಗೆ ಮಿತಿಗೊಳಿಸತಕ್ಕದ್ದು. ( ಉದಾಹರಣೆ 4.99)

20 ಟೆಂಡರುದಾರರು ಕರ್ನಾಟಕ ಲೋಕೋಪಯೋಗಿ ಇಲಾಖೆಯ ನಿಭಂಧನೆಗಳನ್ನು ಹಾಗೂ ಗುತ್ತಿಗಿಯ ಕರಾರುಗಳನ್ನು ಸೂಕ್ಷ್ಮವಾಗಿ ಪರಿಕ್ಷಿಸಬೇಕು. ಅವಶ್ಯಕ ಸಾಮಾಗ್ರಿಗಳಿಗೆ ಸಂಬಂಧಿಸಿದ ಭಾಗಗಳನ್ನು ಸದಾ ಟೆಂಡರುದಾರರು ಗಮನಿಸಬೇಕು. ಸಾಮಾಗ್ರಿಗಳು ಹಾಗೂ ಕೆಲಸಗಾರರಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳಂತೆ ಕೆಲಸದ ಸಮಯದಲ್ಲಿ ಉದ್ಭವಿಸುವ ಯಾವುದೇ ಹೊಸ ರೀತಿನೀತಿಯಂತೆ ಕಾರ್ಯಗಳನ್ನು ನಿರ್ವಹಿಸಬೇಕು. ಕೆಲಸದ ಮೌಲ್ಯವನ್ನು ಟೆಂಡರಿನ ವಾಸವ ಕೆಲಸದ ದರದಲ್ಲಿ ತೀರ್ಮಾನಿಸಲಾಗುವುದು. ಹಾಗೂ ಅಂಗೀಕೃತ ಟಂಡರಿನಂತೆ ಕಡಿತಗಳನ್ನು ಮಾಡಲಾಗುವುದು.

21 ಉಡುಪಿ ನಗರಸಭೆಯು ಯಾವುದೇ ಟೆಂಡರನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣ ನೀಡದೇ ಎಲ್ಲಾ ಟೆಂಡರುಗಳನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ. ಟೆಂಡರು ಸಲ್ಲಿಸಿದ ನಂತರ ಅದನ್ನು ತಿದ್ದುಪಡಿ ಮಾಡಲು ಅಥವಾ ಟೆಂಡರನ್ನು ಹಿಂದಕ್ಕೆ ಪಡೆಯಲು ಟೆಂಡರುದಾರನಿಗೆ ಯಾವುದೇ ಹಕ್ಕು ಇರುವುದಿಲ್ಲ. ಹಾಗೂ ಟೆಂಡರುಗಳನ್ನು ಅಂಗೀಕರಿಸಲು 2 ತಿಂಗಳವರೆಗೆ ಮುಕ್ತ ಅವಕಾಶ ಇದೆ.

**Created by Neevia docuPrinter trial version**

22 ಯಶಸ್ವಿ ಟೆಂಡರುದಾರನು ಟೆಂಡರು ಠೇವಣಿಯನ್ನು ಅಂದಾಜು ವೆಚ್ಚದ ಶೇ. 7.1/2 ಗೆ ಮೀರದಂತೆ ಪಾವತಿಸಲು ತಿಳಿಸಲಾಗುವುದು. ಹಾಗೂ ನಂತರ ತನ್ನ ಸ್ವಂತ ಖರ್ಚಿನಲ್ಲಿ ನಿಗಧಿತ ನಮೂನೆಯಲ್ಲಿ ಗುತ್ತಿಗೆ ನಿಯಮಗಳಿಗೆ ಬದ್ದನಾಗಿರುವ ಬಗ್ಗೆ ಕರಾರು ಮಾಡಿಕೊಳ್ಳಬೇಕು. ಕರಾರು ಮಾಡಿಕೊಂಡ ತಕ್ಷಣ ಕಾಮಗಾರಿಯ ನಿವೇಶನವನ್ನು ಗುತ್ತಿಗೆದಾರರಿಗೆ ವಹಿಸಲಾಗುವುದು. ಭದ್ರತಾ ಠೇವಣಿಯನ್ನು ಸದ್ರಿ ಕಾಮಗಾರಿಯ ಬೆಲೆ ಪಟ್ಟಿಯ ಲೆಕ್ಕ ಪರಿಶೋಧಕರ ಆಕ್ಷೇಪಣೆಗಳು ಮುಕ್ತಗೊಂಡ ನಂತರವೇ ಪಾವತಿಸಲಾಗುವುದು. ಅವಶ್ಯ ಕರಾರು ಮಾಡಿಕೊಳ್ಳದಿದಲ್ಲಿ ಅಥವಾ ಭದ್ರತಾ ಠೇವಣಿಯನ್ನು ಪಾವತಿಸದಿದ್ದಲ್ಲಿ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

23 ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ, ಪೂರ್ವಭಾವಿ ನಿಬಂಧನೆಗಳ ಭಾಗ ಹಾಗೂ ಪ್ಯಾರಗಳನ್ನು ಟೆಂಡರುದಾರರು ಅವಶ್ಯವಾಗಿ ಗಮನಿಸಬೇಕು.

ಅ) ಪರಿಶೀಲಿಸಿ ಪರಿಕ್ಷಿಸಿದ ಹಾಗೂ ತಿರಸ್ಕೃತ ಗುರುತಿಸಿದ ಸಾಮಾಗ್ರಿಗಳು ಹಾಗೂ ಕೆಲಸ ಆ) ನಿರ್ಮಾಣ ಕಾರ್ಯಗಾರ ಇ) ನೀರು ಹಾಗೂ ದೀಪ, ಈ) ಸಾಗಿಸುವಾಗ ಹಾಗೂ ತಲುಪಿಸುವಿಕೆಯಲ್ಲಿ ಸ್ವಚ್ಚಗೊಳಿಸುವಿಕೆ ಉ) ಅಪಘಾತಗಳು ಊ) ವಿಳಂಬ ಎ) ಪಾವತಿ ವಿವರಗಳು ಗುತ್ತಿಗೆದಾರನು ಟೆಂಡರಿನಲ್ಲಿ ಸೂಚಿಸುವ ಎಲ್ಲಾ ದರಗಳಿಗೆ ಸಂಬಂಧಿಸಿದ ನಿಬಂಧನೆಗಳನ್ನು ಸ್ವ ಇಚ್ಚೆಯಿಂದ ಪಡೆಯಬೇಕು.

24 ಟೆಂಡರು ಫಾರಂಗಳು, ನಿಬಂಧನೆಗಳು, ಕಾರ್ಯಗಾರ ವಿವರ, ಹಾಗೂ ನಿಬಂಧನೆ ದರಸೂಚಿ ಪ್ರಮಾಣಗಳು, ಇತ್ಯಾದಿಗಳನ್ನು ನಗರಸಭೆಯಲ್ಲಿ ಕೆಲಸದ ದಿನಗಳಂದು 3 ಗಂಟೆಯಿಂದ 5.30 ಗಂಟೆಯವರೆಗೆ ಪರಿಶೀಲಿಸಬೇಕು.

25 ಟೆಂಡರುದಾರರ ಗಮನವನ್ನು ಗುತ್ತಿಗೆ ಕೆಲಸದಲ್ಲಿ ಪ್ರಾರಂಬಿಸುವ ಸಮಯದ ಕಡಗೆ ಸೆಳೆಯಲಾಗಿದೆ. ಕೆಳಗೆ ತಿಳಿಸಿದ ಪ್ರಗತಿಯನ್ನು ಕಾಮಗಾರಿಯ ನಿವೇಶನವನ್ನು ವಹಿಸಿದ ದಿನಗಳಿಂದ ಸಾಧಿಸಬೇಕು.ಎಲ್ಲಾ ಕಾಮಗಾರಿಯನ್ನು ಗುತ್ತಿಗೆಯ ಕರಾರಿನಲ್ಲಿ ನಿಗಧಿ ಪಡಿಸಿದ ಸಮಯದೊಳಗೆ ತೃಪ್ತಿಕರವಾಗಿ ಮುಗಿಸಿಕೊಡಬೇಕು.

26 ಗುತ್ತಿಗೆದಾರನು ನಗರಸಭಾ ಅಧ್ಯಕ್ಷರ ಒಪ್ಪಿಗೆಯಿಲ್ಲದೇ ಉಪಗುತ್ತಿಗೆ ನೀಡಬಾರದು ಅಥವಾ ತನ್ನ ಪರವಾಗಿ ಕೆಲಸವನ್ನು ನಿರ್ವಹಿಸಲು ಹಾಗೂ ಹಣ ಪಡೆಯಲು ಅಧಿಕಾರ ವರ್ಗಾವಣೆ ಮಾಡಬಾರದು.

27 ಗುತ್ತಿಗೆದಾರನು ಕೆಲಸವನ್ನು ನಿಗಧಿತ ಸಮಯದಲ್ಲಿ ಅಥವಾ ನಿರ್ವಾಹಕ ಅಧಿಕಾರಿಗಳಿಂದ ವಿಸ್ತರಿಸಲ್ಪಟ್ಟ ದಿವಸದೊಳಗೆ ಪೂರ್ಣಗೊಳಿಸದಿದ್ದಲ್ಲಿ ಕಾಮಗಾರಿಯ ಅಂದಾಜುವೆಚ್ಚ ಶೇ. ಅರ್ಧದಂತೆ ಪ್ರತಿ ದಿನಕ್ಕೆ ನಿಗಧಿತ ದಿನದ ನಂತರ ದಂಡ ವಿಧಿಸಲಾಗುವುದು. ಹಾಗೂ ಈ ದಿನಗಳಲ್ಲಿ ಕೆಲಸವನ್ನು ಅಪೂರ್ತಿಯೆಂದು ಪರಿಗಣಿಸಲಾಗುವುದು.

28 ಗುತ್ತಿಗೆದಾರನು ಸ್ವಂತ ಸಾಮಾಗ್ರಿ, ಕಾರ್ಯಗಾರ ಹೊಂದಿರಬೇಕು.

29 ಗುತ್ತಿಗೆದಾರನಿಗೆ ಕಾಮಗಾರಿಗೆ ಸಂಬಂಧಿಸಿದಂತೆ, ಪಾವತಿಸುವ ಎಲ್ಲಾ ಬೆಲೆಪಟ್ಟಿಯಲ್ಲಿ ಶೇ. 5 ರಷ್ಟನ್ನು ಹಿಡಿದು ಪಾವತಿಸಲಾಗುವುದು. ಈ ಹಣವನ್ನು ಅಂಂತಿಮವಾಗಿ ಗುತ್ತಿಗೆ ಕರಾರನ್ನು ತೃಪ್ತಿಕರನಾಗಿ ಪೂರ್ತಿಗೊಳಿಸಿದ ನಂತರ ಪಾವತಿಸಲಾಗುವುದು. ಈ ಹಣವೂ ಭದ್ರತಾ ಠೇವಣಿಯಾಗಿ ಗುತ್ತಿಗೆಯ ತೃಪ್ತಿಕರ ನಿರ್ವಹಣೆಗೆ ಸಂಬಂಧಿಸಿದಂತೆ ಉಂಟಾಗುವ ವಿವಾದಕ್ಕೆ ನಿರ್ಧಾರಣಾಧಿಕಾರಿಗಳ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

30 ಕಾಮಗಾರಿ ನಡೆಯುವ ಸಂದರ್ಭದಲ್ಲಿ ನಿರ್ವಹಣಾಧಿಕಾರಿಗಳು ಮಾಡುವ ಯಾವುದೇ ಬದಲಾವಣೆ ಅಥವಾ ವಿಸ್ತರಣೆ ಕಾಮಗಾರಿಯಲ್ಲಿ ಅಥವಾ ಸಾಮಾಗ್ರಿ ಸರಬರಾಜಿನಲ್ಲಿ ಅದು ಮೂಲ ಅಂದಾಜಿನಲ್ಲಿ ಅಥವಾ ಮೂಲ ನಕ್ಷೆ ವಿನ್ಯಾಸ, ನಿಬಂಧನೆಯಲ್ಲಿ ಇಲ್ಲದಿದ್ದರೂ ಗುತ್ತಿಗೆದಾರನು ನಿಗಧಿತ ಸಮಯದೊಳಗೆ ನಿರ್ವಹಿಸಲು ಬದ್ಧನಾಗಿರುತ್ತಾನೆ.

31 ಗುತ್ತಿಗೆದಾರನು ತನ್ನ ಸ್ವಂತ ಖರ್ಚಿನಲ್ಲಿ ರಸ್ತೆ ತಡೆಗಳನ್ನು ಎಚ್ಚರಿಕೆ ಫಲಕಗಳನ್ನು ದೀಪಗಳನ್ನು ಕೆಲಸದ ಸ್ಥಳದಲ್ಲಿ ಹಾಗೂ ಸಾಮಾಗ್ರಿ ಸಂಗ್ರಹದ ನಿವೇಶನದಲ್ಲೆ ಹಾಕಿ ನಿರ್ವಹಿಸಬೇಕು. ನಗರಸಭೆಗೆ ಗುತ್ತಿಗೆದಾರನ ತಪ್ಪಿನಿಂದ ಉಂಟಾಗುವ ನಷ್ಟಕ್ಕೆ ಆತನನ್ನೇ ಜವಾಬ್ದಾರನನ್ನಾಗಿ ಮಾಡಲಾಗುವುದು.

32 ಕಾಮಗಾರಿ ನಡೆಯುವ ಸ್ಥಳದಲ್ಲಿ ಅಥವಾ ಸಾಮಾಗ್ರಿ ಸರಬರಾಜು ನಿವೇಶನದಲ್ಲಿ ಗುತ್ತಿಗೆದಾರನು ತನ್ನ ಒಬ್ಬ ಅನುಭವಿ ಮೇಸ್ತ್ರಿ ಅಥವಾ ಎಜೆಂಟನನ್ನು ಸದಾ ಕಾಲ ಇರುವಂತೆ ವ್ಯವಸ್ಥೆ ಮಾಡಿರಬೇಕು. ಹಾಗೂ ಆತನು ನಗರಸಭೆಯ ಪೌರಾಯುಕ್ತರು ಅಥವಾ ಕಿರಿಯ ಅಭಿಯಂತರರು ನಿರ್ದೇಶಿಸಿದ ಕೆಲಸ ಮಾಡಿಸಬೇಕು.

33 ಗುತ್ತಿಗೆಯ ಕರಾರನ್ನು ನಗರಸಭಾ ಕಾಯ್ದೆ ಹಾಗೂ ನಿಯಮಗಳು ಹಾಗೂ ಲೋಕೋಪಯೋಗಿ ಇಲಾಖೆ ಕೋಡ್‌ನ ನಿಯಮ ನಿಬಂಧನೆಗಳಿಗೆ ಒಳಪಟ್ಟು ಮಾಡಿಕೊಳ್ಳಲಾಗುವುದು.

34 ಬೇರೆ ಯಾವ ಅವಶ್ಯಕ ಮಾಹಿತಿಗಳನ್ನು ನಗರಸಭಾ ಕಚೇರಿ ಉಡುಪಿಯಿಂದ ಎಲ್ಲಾ ಕೆಲಸದ ದಿನಗಳಲ್ಲಿ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

Created by Neevia docuPrinter trial version

35 ಒಂದೇ ಕೋನದಲ್ಲಿ ಕಾಮಗಾರಿ ಪ್ರಾರಂಭಕ್ಕಿಂತ ಮುಂಚೆ ಪ್ರಗತಿಯ ಮತ್ತು ಪೂರ್ತಿಗೊಂಡ ಛಾಯಾ ಪ್ರತಿಯನ್ನು ಪ್ರತಿಯೊಂದು ಕಾಮಗಾರಿಗೂ ತಯಾರಿಸಿ ನೀಡತಕ್ಕದ್ದು.

36 ಕಾಮಗಾರಿ ಬಿಲ್ಲಿನಿಂದ ಮಾರಾಟಕರ, ಆದಾಯಕರ ಮತ್ತು ಸೆಸ್ಸ್ ಅಲ್ಲದೆ ಶೇಕಡಾ 1.00 ರಷ್ಟು ಕಟ್ಟಡ ಮತ್ತು ಇತರೇ ನಿರ್ಮಾಣ, ಕಾರ್ಮಿಕ ಕಲ್ಯಾಣ ಸುಂಕವನ್ನು ಕಡಿತಗೊಳಿಸಲಾಗುವುದು.

ಪೌರಾಯುಕ್ತರು.

ಉಡುಪಿ ನಗರಸಭೆ, ಉಡುಪಿ

Created by Neevia docuPrinter trial version